ತರಹ ನೋಡಿಕೊಳ್ತಾರೆ. ಒಪ್ಪಿಕೊಳ್ತೀನಿ. ಆದರೆ, ಅವರು ನಿಮಗೆ ಸರಿಯಾದ ಜೋಡಿಯಲ್ಲ. ಅವರಿಗೆ ಲೈಫ್ ಎಂಜಾಯ್ ಮಾಡೋದು ಗೊತ್ತಿಲ್ಲ. ರಸಿಕತೆಯೇ ಇಲ್ಲ. ನನಗೆ ನಿಮ್ಮಂತಹ ಚೆಲುವಾದ ಹೆಂಡತಿ ಇದ್ದಿದ್ದರೆ ಹೇಗೆ ಮೆರೆಸ್ತಿದ್ದೆ ಗೊತ್ತಾ?'' ಭುವನಾ ಕ್ರಮೇಣ ಅವನ ಮಾತಿಗೆ ಮರುಳಾಗಿದ್ದಳು. ಅವನ ಮೋಹಪಾಶದಲ್ಲಿ ಸಿಲುಕಿದ್ದಳು. ಅವಳು ಗಂಡನನ್ನು ನೋಡುವ ದೃಷ್ಟಿಯೇ ಬದಲಾಗಿತ್ತು. ಮಕ್ಕಳು ತನ್ನ ಸುಖಕ್ಕೆ ತೊಡಕು ಎನ್ನಿಸಿತ್ತು. ಒಂದು ದಿನ ಮನೆ, ಗಂಡ, ಮಕ್ಕಳನ್ನು ತೊರೆದು ರಾಮ್‌ಪ್ರಸಾದ್ ಜೊತೆ ಓಡಿಬಂದಿದ್ದಳು.



ರಾಮ್‌ಪ್ರಸಾದ್ ಅವಳನ್ನು ಕರೆದುಕೊಂಡು ಹೋಗಿ ಮಂಗಳೂರಿನಲ್ಲಿ ಮನೆ ಮಾಡಿದ್ದ. ಅವಳನ್ನು ರಾಣಿಯಂತೆ ನೋಡಿಕೊಂಡಿದ್ದ. ಅವಳ ಜೊತೆ ಸಿಂಗಪೂರ್, ದುಬೈಗೆ ಹೋಗಿ ಬಂದಿದ್ದ. ಇದೇ ಸಂದರ್ಭದಲ್ಲಿ ಅವಳು ಎರಡು ಬಾರಿ ಗರ್ಭಿಣಿಯಾಗಿದ್ದಳು. ಅವನು ಮಕ್ಕಳು ಬೇಡವೆಂದು ಗರ್ಭಪಾತ ಮಾಡಿಸಿದ್ದ. ಅನಂತರ ಅವಳನ್ನು ತುಂಬಾ ಕೀಳಾಗಿ ನಡೆಸಿಕೊಂಡಿದ್ದ. ಅವಳನ್ನಿಟ್ಟುಕೊಂಡು ದಂಧೆ ಮಾಡಲಾರಂಭಿಸಿದ್ದ. ಐದು ವರ್ಷ ನರಕ ಅನುಭವಿಸಿ ಅವಳು ಅವನಿಂದ ತಪ್ಪಿಸಿಕೊಂಡು ಬೆಂಗಳೂರಿಗೆ ಬಂದು, ತನ್ನ ಗೆಳತಿ ಪ್ರೇಮಾಳನ್ನು ಸಂಪರ್ಕಿಸಿದ್ದಳು. ಪ್ರೇಮಾ ಅವಳಿಗೆ ಆಶ್ರಯ ನೀಡಿದ್ದಳು. ಅವಳೇ ಕಿಶೋರ್ ನಂಬರ್ ತರಿಸಿಕೊಟ್ಟಿದ್ದಳು. ಭುವನಾ ಧೈರ್ಯಮಾಡಿ ಗಂಡನನ್ನು ಸಂಪರ್ಕಿಸಿದ್ದಳು.

''ಯಾರು ಮಾತಾಡ್ತಿರೋದು?''

''ನಾನು ಭುವನಾ.''

''ಓ... ನೀನಾ? ಹೇಗಿದ್ದೀಯ?''

''ನನಗೆ ಬದುಕೇ ಬೇಡ ಅನ್ನಿಸಿದೆ. ಮಕ್ಕಳು ಹೇಗಿದ್ದಾರೆ?''

''ಚೆನ್ನಾಗಿದ್ದಾರೆ.''

''ನಾನು ನಿಮ್ಮನ್ನು ಭೇಟಿ ಮಾಡಬೇಕು.''

''ನೀನು ಪ್ರೇಮಾ ಮತ್ತು ಅವರ ಅಮ್ಮನ ಜೊತೆ ಇದ್ದೀಯಾಂತ ಗೊತ್ತು. ನಾನೇ ಬಂದು ಭೇಟಿ ಮಾಡ್ತೀನಿ.''

''ಯಾವಾಗ ಬರ್ತೀರಾ?''

''ಮುಂದಿನ ಭಾನುವಾರ ಅಂದ್ರೆ 20ನೇ ತಾರೀಕು ಬೆಳಗ್ಗೆ ಹನ್ನೊಂದು ಗಂಟೆಗೆ ಬರ್ತೀನಿ'' ಮುಂದೆ ಮಾತನಾಡಲು ಅವಕಾಶ ಕೊಡದೆ ಕಾಲ್ ಕಟ್ ಮಾಡಿದ್ದ.

ಭುವನಾ ಗೆಳತಿಯನ್ನು ಅಪ್ಪಿಕೊಂಡು ಅತ್ತಿದ್ದಳು.

''ಕಿಶೋರ್ ತಾಳ್ಮೆಯಿಂದ ಮಾತಾಡಿದ್ದಾನೆ ಅಂದಮೇಲೆ ಅವನು ಖಂಡಿತ ನಿನ್ನನ್ನು ಮನೆಗೆ